KACD510022622023

Presented on : 25-11-2023
Registered on : 25-11-2023
Decided on : 04-07-2026
Duration : 2 years, 7 months, 9 days

**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಸದುರ್ಗ.**

**ದಿನಾಂಕಃ 04 ನೇ ಜುಲೈ ಮಾಹೆ, 2026 ನೇ ಇಸವಿ**

**: ಉಪಸ್ಥಿತರು :**

**ಶ್ರೀ ಪ್ರಸನ್ನ ಕುಮಾರ್ ಸಿ.,** ಬಿ.ಎ.ಎಲ್. ಎಲ್ಎಲ್.ಬಿ.
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಹೊಸದುರ್ಗ.

**ಸಿ.ಸಿ. ಸಂಖ್ಯೆಃ 1065/2023**

ರಾಜ್ಯದ ಪರವಾಗಿ
ಹೊಸದುರ್ಗ ಪೊಲೀಸರು, ಹೊಸದುರ್ಗ,
ಚಿತ್ರದುರ್ಗ ಜಿಲ್ಲೆ.

**.....ಫಿರ್ಯಾದುದಾರರು**

**(ಫಿರ್ಯಾದುದಾರರ ಪರವಾಗಿ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿನಿಧಿಸಿರುತ್ತಾರೆ)**

**ವಿರುದ್ಧ**

ಚೇತನ್ ತಂದೆ ರಾಜಪ್ಪ,
ಸುಮಾರು 35 ವರ್ಷ,
ವೃತ್ತಿ: ವ್ಯವಹಾರ
ವಾಸ: ಕೃಷ್ಣಾಪುರ ಗ್ರಾಮ
ಹೊಸದುರ್ಗ ತಾಲ್ಲೂಕು,
ಚಿತ್ರದುರ್ಗ ಜಿಲ್ಲೆ. **... ಆರೋಪಿ**

**(ಆರೋಪಿಯ ಪರವಾಗಿ ಶ್ರೀ ಜಿ.ವಿ.ಮಂಜುನಾಥ ವಕೀಲರು ಪ್ರತಿನಿಧಿಸಿರುತ್ತಾರೆ**.)

| | | |
|---|---|---|
| ಕೃತ್ಯ ನಡೆದ ದಿನಾಂಕ | : | 09.09.2023 |
| ಯಾವ ಕಲಂ.ಗಳಡಿಯಲ್ಲಿ | : | ಕರ್ನಾಟಕ ರಾಜ್ಯ ಅಬಕಾರಿ ಕಾಯ್ದೆ |

| | | |
|---|---|---|
| ಆರೋಪಣೆ ಮಾಡಲಾಗಿದೆ | | 1965 ರ ಕಲಂ. ಸಹವಾಚಕ 32 ಮತ್ತು 34. |
| ಸಾಕ್ಷಿ ವಿಚಾರಣೆ ಪ್ರಾರಂಭವಾದ ದಿನಾಂಕ | : | 11.07.2024 |
| ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | | 30.04.2026 |
| ತೀರ್ಪು ಘೋಷಣೆಯಾದ ದಿನಾಂಕ | : | 04.07.2026 |
| ಆರೋಪಿತರ ಹೇಳಿಕೆ | : | ತಪ್ಪು ಮಾಡಿಲ್ಲ |
| ನ್ಯಾಯಾಲಯದ ಅಭಿಪ್ರಾಯ | : | ಆರೋಪಿಯನ್ನು ದೋಷಮುಕ್ತಗೊಳಿಸಿ ಬಿಡುಗಡೆ ಮಾಡಲಾಗಿದೆ |

**(ಪ್ರಸನ್ನ ಕುಮಾರ್ ಸಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹೊಸದುರ್ಗ.**

**** ತೀರ್ಪು****

ಪ್ರಸ್ತುತ ಪ್ರಕರಣದಲ್ಲಿ ಪೊಲೀಸ್ ಉಪ ನಿರೀಕ್ಷಕರು, ಹೊಸದುರ್ಗ ಪೊಲೀಸ್ ಠಾಣೆ, ಹೊಸದುರ್ಗ ಇವರು ಮೇಲ್ಕಂಡ ಆರೋಪಿಯ ವಿರುದ್ಧ ಕರ್ನಾಟಕ ರಾಜ್ಯ ಅಬಕಾರಿ ಕಾಯ್ದೆ 1965 ರ ಕಲಂ.32 ಮತ್ತು 34 ರಡಿ ದಂಡಿಸಲ್ಪಡುವ ಅಪರಾಧಗಳನ್ನು ಎಸಗಿರುತ್ತಾರೆಂದು ಆರೋಪಿಸಿ ಅವರ ವಿರುದ್ಧ ಅಂತಿಮ ದೋಷಾರೋಪಣಾ ವರದಿಯನ್ನು ಸಲ್ಲಿಸಿರುತ್ತಾರೆ.

**ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ.**

2. ದಿನಾಂಕಃ 09.09.2023 ರಂದು ರಾತ್ರಿ 8.10 ಗಂಟೆ ಸಮಯದಲ್ಲಿ ಹೊಸದುರ್ಗ ಪೊಲೀಸ್ ಠಾಣಾ ಸರಹದ್ದಿನಲ್ಲಿ ಬರುವ ಹೊಸದುರ್ಗ ತಾಲ್ಲೂಕಿನ ಕೃಷ್ಣಾಪುರ ಗ್ರಾಮದ ಆರೋಪಿಯು ಅವರ ಚಿಲ್ಲರೆ ಅಂಗಡಿಯ ಮುಂಭಾಗದ ಸಾರ್ವಜನಿಕ ಸ್ಥಳದಲ್ಲಿ ಮದ್ಯದ ಪೌಚ್ ಗಳನ್ನು ಕಾನೂನು ಬಾಹಿರವಾಗಿ ಸರ್ಕಾರದಿಂದ ಯಾವುದೇ ಪರವಾನಗಿ ಇಲ್ಲದೇ ಅಕ್ರಮವಾಗಿ ಆರೋಪಿಯು ಸ್ವಾಧೀನದಲ್ಲಿ ಇಟ್ಟುಕೊಂಡು ಅಕ್ರಮವಾಗಿ ಸಾರ್ವಜನಿಕರಿಗೆ ಮಾರಾಟ ಮಾಡಿರುವುದು ಈ

ಪ್ರಕರಣದ ಸಾರಾಂಶವಾಗಿರುತ್ತದೆ.

3. ಪ್ರಸ್ತುತ ಪ್ರಕರಣದಲ್ಲಿ ಚಾಸಾ-1 ಇಮ್ರಾನ್ ಪೊಲೀಸ್ ಉಪ ನಿರೀಕ್ಷಕರು ರವರು ದಿನಾಂಕಃ 09.09.2023 ರಂದು ಸಂಜೆ 7-15 ಗಂಟೆ ಸಮಯದಲ್ಲಿ ಚಾಸಾ-1 ರವರಿಗೆ ಚಾಸಾ-4 ರವರು ಅವರ ಬೀಟ್ ವ್ಯಾಪ್ತಿಯ ಕೃಷ್ಣಾಪುರ ಗ್ರಾಮದಲ್ಲಿ ಆರೋಪಿಯು ತಮ್ಮ ಚಿಲ್ಲರೆ ಅಂಗಡಿ ಮುಂಭಾಗ ಸಾರ್ವಜನಿಕ ಸ್ಥಳದಲ್ಲಿ ಯಾವುದೇ ಪರವಾಗಿ ಇಲ್ಲದೇ ಅಕ್ರಮವಾಗಿ ಸಾರ್ವಜನಿಕರಿಗೆ ಮದ್ಯ ಮಾರಾಟ ಮಾಡುತ್ತಿರುವ ಬಗ್ಗೆ ಬಾತ್ಮಿ ಬಂದಿರುತ್ತದೆ ಎಂದು ತಿಳಿಸಿದ್ದು, ಸದರಿ ಬಾತ್ಮಿಯ ಆಧಾರದ ಮೇರೆಗೆ ಒಂದು ಜ್ಞಾಪನ ತಯಾರಿಸಿ ಚಾಸಾ-7 ರವರಿಗೆ ಜ್ಞಾಪನ ನೀಡಿದ ಮೇರೆಗೆ ಪ್ರಕರಣವನ್ನು ದಾಖಲಿಸಿಕೊಂಡಿರುತ್ತಾರೆ. ನಂತರ ಚಾಸಾ-4 ರವರೊಂದಿಗೆ ದಾಳಿ ಮಾಡಲು ಠಾಣೆಯಿಂದ ಹೊರಟು ಕೃಷ್ಣಾಪುರ ಗ್ರಾಮದ ಹೊರವಲಯದಲ್ಲಿ ಚಾಸಾ-2 ಮತ್ತು 3 ರವರನ್ನು ಪಂಚರನ್ನಾಗಿ ನೇಮಿಸಿಕೊಂಡು, ಕೃತ್ಯ ಸ್ಥಳದ ಬಳಿ ಹೋಗಿ ಸ್ವಲ್ಪ ದೂರದಿಂದ ಮರೆಯಲ್ಲಿ ನಿಂತು ನೋಡಲಾಗಿ ಆರೋಪಿಯು ಬಿಳಿ ಪ್ಲಾಸ್ಟಿಕ್ ಚೀಲದಲ್ಲಿ ಮದ್ಯವನ್ನು ಸಾರ್ವಜನಿಕರಿಗೆ ಮಾರಾಟ ಮಾಡತ್ತಿರುವುದು ಕಂಡುಬಂದಿದ್ದು, ದಾಳಿ ಮಾಡಿದಾಗ ಸದರಿ ವ್ಯಕ್ತಿ ಅಲ್ಲಿಂದ ತಪ್ಪಿಸಿಕೊಂಡು ಹೋಗಿರುತ್ತಾರೆ. ನಂತರ ಬಿಟ್ಟು ಹೋಗಿದ್ದ ಬಿಳಿ ಚೀಲವನ್ನು ಪರಿಶೀಲಿಸಲಾಗಿ 90 ಎಂ ಎಲ್ ನ 41 ರಾಜಾ ವಿಸ್ಕಿಯ ಪೌಚುಗಳು ಇದ್ದು, ಪಂಚರ ಸಮಕ್ಷಮ ದೊರೆತ ಸ್ವತ್ತುಗಳನ್ನು ಅಮಾನತ್ತುಪಡಿಸಿ ಪಂಚನಾಮೆ ಕ್ರಮ ಜರುಗಿಸಿ, ನಂತರ ಠಾಣೆಗೆ ಬಂದು ಅಮಾನತ್ತುಪಡಿಸಿಕೊಂಡ ಮಾಲು, ಸ್ಥಳ ಮಹಜರ್ ಮತ್ತು ತನಿಖಾ ವರದಿಯನ್ನು ಮುಂದಿನ ಕ್ರಮಕ್ಕಾಗಿ ಚಾಸಾ-7 ರವರಿಗೆ ವಹಿಸಿಕೊಟ್ಟಿರುತ್ತಾರೆ. ನಂತರ ಚಾಸಾ-7 ಧರಣೇಶಪ್ಪ ಪಿ ರವರು ಚಾಸಾ-1 ರವರಿಂದ ವರದಿಯನ್ನು ಸ್ವೀಕರಿಸಿ ಪ್ರಕರಣ ದಾಖಲಿಸಿಕೊಂಡು ನಂತರ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತಾರೆ. ನಂತರ ದಿನಾಂಕ 10.09.2023 ರಂದು ಆರೋಪಿಗೆ ನೋಟೀಸ್ ನೀಡಿ, ದಿನಾಂಕ 15.09.2023 ರಂದು ವಶಪಡಿಸಿಕೊಂಡ ಮದ್ಯದ ಸ್ವತ್ತುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಚಿತ್ರದುರ್ಗ ಕೇಂದ್ರಕ್ಕೆ ಚಾಸಾ-5 ರವರ ಮೂಲಕ ಕಳುಹಿಸಿ, ನಂತರ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-8 ರವರಿಗೆ ವಹಿಸಿಕೊಟ್ಟಿರುತ್ತಾರೆ.

ನಂತರ ಚಾಸಾ-8 ಭೀಮನಗೌಡ ಪಾಟೀಲ್ ರವರು ದಿನಾಂಕ 29.10.2023 ರಂದು ಪ್ರಕರಣದ ಕಡತವನ್ನು ಪಡೆದು ತನಿಖೆ ಮುಂದುವರೆಸಿ ಆರೋಪಿಯ ವಿರುದ್ಧ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

4. ಆರೋಪಿಯು ಜಾಮೀನಿನ ಮೇಲೆ ಬಿಡುಗಡೆಯಾಗಿರುತ್ತಾರೆ. ದಂಡ ಪ್ರಕ್ರಿಯಾ ಸಂಹಿತೆ  ಕಲಂ. 207 ರಡಿಯಲ್ಲಿ ದೋಷಾರೋಪಣಾ ಪತ್ರದ ನಕಲುಗಳನ್ನು ಪೂರೈಸಿದ ನಂತರ ದೋಷಾರೋಪಣಾ ಪೂರ್ವ ವಾದವನ್ನು ಆಲಿಸಲಾಯಿತು. ನಂತರ ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 273 ಮತ್ತು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34 ನೇ ಅಪರಾಧಗಳಿಗೆ ದೋಷಾರೋಪಣೆಯನ್ನು ರಚಿಸಿ ಅಪರಾಧದ ಆರೋಪವನ್ನು ಓದಿ ಹೇಳಲಾಗಿ ಆರೋಪಿ ತಾನು ತಪ್ಪು ಮಾಡಿಲ್ಲವೆಂದು ಹೇಳಿ, ತಮ್ಮ ಮೇಲಿನ ಆರೋಪಗಳನ್ನು ಅಲ್ಲಗಳೆದಿರುತ್ತಾರೆ.

5. ಅದರಂತೆ ಈ ಕೆಳಕಂಡ ಅಂಶಗಳು ಈ ನ್ಯಾಯಾಲಯದ ನಿರ್ಣಯಕ್ಕೆ ಉದ್ಭವಿಸುತ್ತದೆ.

1. ದಿನಾಂಕಃ 09.09.2023 ರಂದು 8.10 ಗಂಟೆ ಸಮಯದಲ್ಲಿ ಹೊಸದುರ್ಗ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಹೊಸದುರ್ಗ ತಾಲ್ಲೂಕು ಕೃಷ್ಣಾಪುರ ಗ್ರಾಮದ ಆರೋಪಿಯು ಅವರ ಚಿಲ್ಲರೆ ಅಂಗಡಿಯ ಮುಂದಿನ ಸಾರ್ವಜನಿಕ ಸ್ಥಳದಲ್ಲಿ ಕಾನೂನು ಬಾಹಿರವಾಗಿ ಮದ್ಯದ ಪೌಚ್ ಗಳನ್ನು ಸರ್ಕಾರದಿಂದ ಯಾವುದೇ ಪರವಾನಗಿ ಇಲ್ಲದೇ ನಿಗದಿತ ಮಟ್ಟಕ್ಕಿಂತ ಹೆಚ್ಚಿನ ಮದ್ಯವನ್ನು ಅಕ್ರಮವಾಗಿ ಹೊಂದಿದ್ದು, ಅದರನ್ವಯ ಕರ್ನಾಟಕ  ಅಬಕಾರಿ ಕಾಯ್ದೆ ಕಲಂ.32 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಆರೋಪಿ ಎಸಗಿದ್ದಾರೆ ಎಂಬುದನ್ನು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೆ?

2. ಎರಡನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯು ಅಕ್ರಮವಾಗಿ ಹಣ ಸಂಪಾದನೆ ಮಾಡುವ ಉದ್ದೇಶದಿಂದ ಸರ್ಕಾರದ ವತಿಯಿಂದ ಯಾವುದೇ ಪರವಾನಗಿ ಪಡೆಯದೆ ಅಕ್ರಮವಾಗಿ ಮದ್ಯ ಮಾರಾಟ ಮಾಡಲು ಆರೋಪಿಯು ಸಾರ್ವಜನಿಕವಾಗಿ ಮದ್ಯ ತುಂಬಿದ ಪೌಚ್ ಗಳನ್ನು ಕಾನೂನು ಬಾಹಿರವಾಗಿ ಸ್ವಾಧೀನ ಹೊಂದಿದ್ದು, ಅದರನ್ವಯ ಕರ್ನಾಟಕ ಅಬಕಾರಿ ಕಾಯ್ದೆ ಕಲಂ.34 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಆರೋಪಿ ಎಸಗಿದ್ದಾರೆ ಎಂಬುದನ್ನು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೆ?

3. ಯಾವ ಆದೇಶ

6. ಅಭಿಯೋಜನೆಯವರು ಆರೋಪಿಯ ಮೇಲೆ ಹೊರಿಸಿದ ಆರೋಪಗಳನ್ನು ರುಜುವಾತು ಮಾಡುವ ಸಲುವಾಗಿ ದೋಷರೋಪಣೆ ಪಟ್ಟಿಯಲ್ಲಿರುವ ಸಾಕ್ಷಿದಾರರಾದ ಚಾಸಾ-1 ರಿಂದ ಚಾಸಾ.8 ರವರ ಪೈಕಿ ಚಾಸಾ-1 ರಿಂದ 4, 8 ಮತ್ತು 7 ರವರನ್ನು ಕ್ರಮವಾಗಿ ಅಸಾ.1 ರಿಂದ 6 ಎಂದು ಅಭಿಯೋಜನೆಯ ಪರವಾಗಿ ಸಾಕ್ಷಿದಾರರನ್ನಾಗಿ ವಿಚಾರಣೆ ಮಾಡಿದೆ. ಅದಕ್ಕೆ ಪೂರಕವಾಗಿ ನಿಪಿ-1 ರಿಂದ ನಿಪಿ-11 ರಂತೆ ದಾಖಲೆಗಳನ್ನು ನಿಶಾನೆಗೆ ಗುರುತಿಸಿಕೊಂಡಿದೆ. ಅಲ್ಲದೇ ರಾಸಾಯನಿಕ ಪರೀಕ್ಷೆಗಾಗಿ ತೆಗೆದ ಎಲ್ಲಾ ಮದ್ಯದ ಪೌಚ್ ಗಳನ್ನು ಒಟ್ಟಾಗಿ ಮು.ಮಾ.1 ಎಂದು ಗುರುತಿಸಿಕೊಂಡಿರುತ್ತಾರೆ. ಸಾಕ್ಷ್ಯ ಪುನರಾವರ್ತನೆಯಾಗುವುದನ್ನು ತಪ್ಪಿಸುವ ಸಲುವಾಗಿ ಅಭಿಯೋಜನೆಯವರು ಚಾಸಾ.5 ಮತ್ತು 6 ರವರ ಸಾಕ್ಷ್ಯವನ್ನು ಕೈಬಿಟ್ಟಿರುತ್ತಾರೆ. ನಂತರ ಅಭಿಯೋಜನೆಯ ಪರ ವಿಚಾರಣೆಯನ್ನು ಮುಕ್ತಾಯಗೊಳಿಸಲಾಯಿತು.

7. ಅಭಿಯೋಜನೆಯ ಪರವಾಗಿ ಸಾಕ್ಷಿಗಳ ವಿಚಾರಣೆಗಳನ್ನು ಮುಗಿಸಿದ ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ. 313 ರಡಿಯಲ್ಲಿ ಪ್ರಶ್ನೆಗಳನ್ನು ರಚಿಸಿ, ಆರೋಪಿಯ

ಹೇಳಿಕೆಯನ್ನು ಪಡೆಯಲಾಯಿತು. ಆರೋಪಿ ಎಲ್ಲಾ ಪ್ರಶ್ನೆಗಳನ್ನು ಮತ್ತು ವಿರುದ್ಧದ ಸಾಕ್ಷ್ಯಗಳನ್ನು ತನ್ನ ಹೇಳಿಕೆಯಲ್ಲಿ ಸುಳ್ಳು ಎಂದು ನಿರಾಕರಿಸಿ ಉತ್ತರಿಸಿರುತ್ತಾರೆ. ಆರೋಪಿ ತಮ್ಮ ಪರವಾಗಿ ಯಾವುದೇ ಮೌಖಿಕ ಸಾಕ್ಷ್ಯವನ್ನು ಮಂಡಿಸಿರುವುದಿಲ್ಲ ಹಾಗೂ ತನ್ನ ಪರವಾಗಿ ಯಾವುದೇ ದಾಖಲೆಗಳನ್ನು ನಿಶಾನೆಗೆ ಗುರುತಿಸಿಕೊಂಡಿರುವುದಿಲ್ಲ.

8. ಉಭಯ ಪಕ್ಷಗಾರರ ವಾದ -ವಿವಾದಗಳನ್ನು ಆಲಿಸಲಾಯಿತು. ಈ ಪ್ರಕರಣದ ಕಡತ ಹಾಗೂ ಸಾಕ್ಷಿಗಳ ಸಾಕ್ಷ್ಯವನ್ನು ಹಾಗೂ ಲಭ್ಯವಿರುವ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಲಾಗಿದೆ.

9. ಅಭಿಯೋಜನೆಯ ಮೌಖಿಕ ಹಾಗೂ ದಸ್ತಾವೇಜು ಸಾಕ್ಷ್ಯಗಳನ್ನು ಆಧರಿಸಿ, ನ್ಯಾಯಾಲಯವು ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತದೆ.

ಅಂಶಃ 1 ಮತ್ತು 2 - ನಕಾರಾತ್ಮಕವಾಗಿ
ಅಂಶಃ 3 - ಅಂತಿಮ ಆದೇಶದಂತೆ
ಈ ಕೆಳಕಂಡ ಕಾರಣಗಳಿಗೋಸ್ಕರ

**:: ಕಾರಣಗಳು ::**

10. **ಅಂಶಃ 1 ಮತ್ತು 2:** - ಈ ಎರಡು ಅಂಶಗಳು ಪರಸ್ಪರ ಒಂದಕ್ಕೊಂದು ಸಂಬಂಧಪಟ್ಟಿರುವುದರಿಂದ ಸಾಕ್ಷ್ಯದ ವಿಶ್ಲೇಷಣೆಯ ಪುನರಾವರ್ತನೆಯನ್ನು ತಪ್ಪಿಸುವ ಉದ್ದೇಶದಿಂದ ಈ ಎರಡೂ ಅಂಶಗಳನ್ನು ಒಟ್ಟಾಗಿ ಚರ್ಚೆಗೆ ತೆಗೆದುಕೊಳ್ಳಲಾಗಿದೆ. ವಿಚಾರಣೆ ಸಮಯದಲ್ಲಿ ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 273 ರಡಿಯಲ್ಲಿ ದೋಷಾರೋಪಣೆ ರಚಿಸಿದ್ದರೂ ಸದರಿ ಆರೋಪವನ್ನು ಪುಷ್ಟೀಕರಿಸುವ ಯಾವುದೇ ಸಾಕ್ಷ್ಯ ಮತ್ತು ಆಧಾರ ಕಂಡು ಬರದ ಕಾರಣ ಸದರಿ ಭಾರತೀಯ ದಂಡ ಸಂಹಿತೆ ಕಲಂ 273 ರಡಿಯಲ್ಲಿ ಯಾವುದೇ ಅಂಶಗಳನ್ನು ನಿರ್ಣಯಕ್ಕಾಗಿ ರಚಿಸಿರುವುದಿಲ್ಲ.

11. ಅಸಾ-1 ಇಮ್ರಾನ್ ರವರು ಪೊಲೀಸ್ ಉಪನಿರೀಕ್ಷಕರಾಗಿದ್ದು, ಈ ಪ್ರಕರಣದ ಫಿರ್ಯಾದುದಾರರಾಗಿರುವುದಲ್ಲದೇ, ದಾಳಿಯ ಮುಂದಾಳತ್ವವನ್ನು ವಹಿಸಿದ ಅಬಕಾರಿ ನಿರೀಕ್ಷಕ ಅಧಿಕಾರಿಯಾಗಿರುತ್ತಾರೆ. ಅವರ ಮೂಲಕ ಜ್ಞಾಪನವನ್ನು ನಿಪಿ-

1 ಹಾಗೂ ಸದರಿ ದಾಖಲೆಯಲ್ಲಿರುವ ಅವರ ಸಹಿಯನ್ನು ನಿಪಿ-1(ಎ), ಅಮಾನತ್ತು ಪಂಚನಾಮೆಯನ್ನು ನಿಪಿ-2 ಹಾಗೂ ಸದರಿ ದಾಖಲೆಯಲ್ಲಿರುವ ಅವರ ಸಹಿಯನ್ನು ನಿಪಿ-2(ಎ), ಪಂಚರಿಗೆ ನೀಡಿದ ನೋಟೀಸ್ ನ್ನು ನಿಪಿ-3 ಸದರಿ ದಾಖಲೆಯಲ್ಲಿರುವ ಅವರ ಸಹಿಯನ್ನು ನಿಪಿ-3(ಎ) ಎಂದು ರಾಸಾಯನಿಕ ಪರೀಕ್ಷೆಗಾಗಿ ಮಾದರಿಗೆ ತೆಗೆದ ವಿಸ್ಕಿ ಪೌಚ್ ಗಳನ್ನು ಒಟ್ಟಾಗಿ ಮುಮಾ-1 ಎಂದು ಗುರುತಿಸಿರುತ್ತಾರೆ.

12. ಅಸಾ-2 ಶ್ರೀ ಜಯಪ್ಪ ರವರು ಮಹಜರ್ ಸಮಯದಲ್ಲಿ ಹಾಜರಿದ್ದು ಪಂಚನಾಮೆಗೆ ಸಹಿ ಮಾಡಿದ ಸಾಕ್ಷಿದಾರರಾಗಿದ್ದರೂ ಈ ಪ್ರಕರಣದಲ್ಲಿ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಅವರ ಮೂಲಕ ನಿಪಿ-2 ರ ದಾಖಲೆಯ ಮೇಲಿರುವ ಅವರ ಸಹಿಯನ್ನು ನಿಪಿ-2(ಬಿ) ಎಂದು ಹಾಗೂ ಅವರ ಹೇಳಿಕೆಯನ್ನು ನಿಪಿ-4 ಎಂದು ನಿಶಾನೆಗೆ ಗುರುತಿಸಿಕೊಂಡಿರುತ್ತಾರೆ. ಅಸಾ-3 ಶ್ರೀ ಕಟ್ಟೇಶಪ್ಪ ರವರು ಮಹಜರ್ ಸಮಯದಲ್ಲಿ ಹಾಜರಿದ್ದು ಪಂಚನಾಮೆಗೆ ಸಹಿ ಮಾಡಿದ ಸಾಕ್ಷಿದಾರರಾಗಿದ್ದರೂ ಈ ಪ್ರಕರಣದಲ್ಲಿ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಅವರ ಮೂಲಕ ನಿಪಿ-2 ರ ದಾಖಲೆಯ ಮೇಲಿರುವ ಅವರ ಸಹಿಯನ್ನು ನಿಪಿ-2(ಸಿ) ಎಂದು ಹಾಗೂ ಅವರ ಹೇಳಿಕೆಯನ್ನು ನಿಪಿ-5 ಎಂದು ನಿಶಾನೆಗೆ ಗುರುತಿಸಿಕೊಂಡಿರುತ್ತಾರೆ.

13. ಅಸಾ-4 ತ್ಯಾಗರಾಜ ನಾಯಕ್ ಡಿ ರವರು ಮುಖ್ಯ ಪೇದೆ ಆಗಿದ್ದು, ಈ ಪ್ರಕರಣದಲ್ಲಿ ಫಿರ್ಯಾದುದಾರರಿಗೆ ಅಬಕಾರಿ ದಾಳಿಯ ಸಮಯದಲ್ಲಿ ಸಹಕರಿಸಿದ ಸಾಕ್ಷಿದಾರರಾಗಿರುತ್ತಾರೆ, ಅವರ ಮೂಲಕ ಯಾವುದೇ ದಾಖಲೆಗಳನ್ನು ಗುರುತಿಸಿರುವುದಿಲ್ಲ.

14. ಅಸಾ-5 ಭೀಮನಗೌಡ ಪಾಟೀಲ್ ಪೊಲೀಸ್ ಉಪ ನಿರೀಕ್ಷಕರಾಗಿದ್ದು ಚಾಸಾ-7 ರವರಿಂದ ಪ್ರಕರಣದ ಕಡತವನ್ನು ಪಡೆದು ತನಿಖೆ ಪೂರ್ಣಗೊಳಿಸಿ ಅಂತಿಮ ದೋಷಾರೋಪಣ ವರದಿಯನ್ನು ಘನ ನ್ಯಾಯಾಲಯಕ್ಕೆ ಸಲ್ಲಿಸಿದ ಅಧಿಕಾರಿಯಾಗಿರುತ್ತಾರೆ. ಅವರ ಮೂಲಕ ರಾಸಾಯನಿಕ ವಿಶ್ಲೇಷಣಾ ವರದಿಯನ್ನು ನಿಪಿ-6 ಎಂದು ಹಾಗೂ ಸದರಿ ದಾಖಲೆಯಲ್ಲಿರುವ ಅವರ ಸಹಿಗಳನ್ನು ನಿಪಿ-6(ಎ) ಎಂದು ನಿಶಾನೆಗೆ ಗುರುತಿಸಿಕೊಂಡಿರುತ್ತಾರೆ.

15. ಅಸಾ-6 ಧರಣೇಶಪ್ಪ ಪಿ ರವರು ಪ್ರಕರಣದ ದಾಖಲಿಸಿಕೊಂಡು ಪೊಲೀಸ್ ನಿರೀಕ್ಷಕರಾಗಿದ್ದು ಅವರ ಮೂಲಕ ನಿಪಿ-1, 4 ಮತ್ತು ರ ದಾಖಲೆಯಲ್ಲಿರುವ ಅವರ ಸಹಿಯನ್ನು ನಿಪಿ-1(ಬಿ), ನಿಪಿ-4(ಎ) ಮತ್ತು ನಿಪಿ-5(ಎ), ಪ್ರಥಮ ವರ್ತಮಾನ ವರದಿಯನ್ನು ನಿಪಿ7 ಹಾಗೂ ಸದರಿ ದಾಖಲೆಗಳಲ್ಲಿರುವ ಅವರ ಸಹಿಯನ್ನು ನಿಪಿ-7(ಎ), ನಿಪಿ-8 ಸ್ವತ್ತು ಪಟ್ಟಿ ಹಾಗೂ ಸದರಿ ದಾಖಲೆಯಲ್ಲಿರುವ ಅವರ ಸಹಿಯನ್ನು ನಿಪಿ-8(ಎ), ನಿಪಿ-9 ರಹದಾರಿ ಪತ್ರ ಹಾಗೂ ಸದರಿ ದಾಖಲೆಯಲ್ಲಿರುವ ಅವರ ಸಹಿಯನ್ನು ನಿಪಿ-9(ಎ), ನಿಪಿ-10 ಆರೋಪಿಗೆ ನೀಡಿದ ವಿಚಾರಣಾ ನೋಟೀಸ್ ಹಾಗೂ ಸದರಿ ದಾಖಲೆಯಲ್ಲಿರುವ ಅವರ ಸಹಿಯನ್ನು ನಿಪಿ-10(ಎ), ನಿಪಿ-11 ಚಾಸಾ-4 ರವರ ಹೇಳಿಕೆ ಹಾಗೂ ಸದರಿ ದಾಖಲೆಯಲ್ಲಿರುವ ಅವರ ಸಹಿಯನ್ನು ನಿಪಿ-11(ಎ) ಎಂದು ನಿಶಾನೆಗೆ ಗುರುತಿಸಿಕೊಂಡಿರುತ್ತಾರೆ.

16. ಇನ್ನೂ ಅಸಾ-2 ಜಯಪ್ಪ ರವರು ಕೃತ್ಯ ಸ್ಥಳ ಮತ್ತು ಅಮಾನತ್ತು ಮಹಜರ್ ನ ಪಂಚ ಸಾಕ್ಷಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ನಿಪಿ.2 ರ ದಾಖಲೆಯನ್ನು ಹಾಗೂ ಅದರಲ್ಲಿರುವ ಸಹಿಯನ್ನು ನಿಪಿ.2(ಬಿ) ರಂತೆ ಗುರುತಿಸಿರುತ್ತಾರೆ. ಸದರಿ ನಿಪಿ.2 ರಲ್ಲಿರುವ ಸಹಿಯನ್ನು ಸುಮಾರು 2-3 ವರ್ಷಗಳ ಹಿಂದೆ ಹೊಸದುರ್ಗ ಪಟ್ಟಣದ ತಾಲ್ಲೂಕು ಕಛೇರಿ ಹತ್ತಿರ ಸಹಿ ಮಾಡಿರುವುದಾಗಿ, ಯಾವ ಕಾರಣಕ್ಕೆ ಸಹಿ ಮಾಡಿರುತ್ತೇನೆಂದು ತನಗೆ ಗೊತ್ತಿಲ್ಲ, ತನ್ನ ಸಮಕ್ಷಮ ಪೊಲೀಸರು ಯಾವುದೇ ಮಹಜರ್ ಮಾಡಿಲ್ಲ, ಯಾವುದೇ ವಸ್ತುಗಳನ್ನು ಅಮಾನತ್ತು ಮಾಡಿಕೊಂಡಿಲ್ಲ ಹಾಗೂ ತಾವು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲವೆಂದು ನಿಪಿ.2 ರಲ್ಲಿನ ವಿಚಾರಗಳು ಗೊತ್ತಿಲ್ಲವೆಂದು ಸದರಿ ದಾಖಲೆಗಳಿಗೆ ತದ್ವಿರುದ್ಧವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅಲ್ಲದೇ ನ್ಯಾಯಾಲಯದ ಮುಂದಿರುವ ಮು.ಮಾ-1 ನ್ನು ಸಹಾ ನೋಡಿ ಗುರುತಿಸುವಲ್ಲಿಯೂ ಸಹ ಸದರಿ ಸಾಕ್ಷಿದಾರರು ವಿಫಲರಾಗಿರುತ್ತಾರೆ.

17. ಅಸಾ-3 ಕಟ್ಟೇಶಪ್ಪ ರವರು ಕೃತ್ಯ ಸ್ಥಳ ಮತ್ತು ಅಮಾನತ್ತು ಮಹಜರ್ ನ ಪಂಚ ಸಾಕ್ಷಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ನಿಪಿ.2 ರ ದಾಖಲೆಯನ್ನು ಹಾಗೂ ಅದರಲ್ಲಿರುವ ಸಹಿಯನ್ನು ನಿಪಿ.2(ಸಿ) ರಂತೆ

ಗುರುತಿಸಿರುತ್ತಾರೆ. ಸದರಿ ನಿಪಿ.2 ರಲ್ಲಿರುವ ಸಹಿಯನ್ನು ಸುಮಾರು 7-8 ತಿಂಗಳ ಹಿಂದೆ ಹೊಸದುರ್ಗ ಪಟ್ಟಣದ ತಾಲ್ಲೂಕು ಕಛೇರಿ ಹತ್ತಿರ ಸಹಿ ಮಾಡಿರುವುದಾಗಿ, ಯಾವ ಕಾರಣಕ್ಕೆ ಸಹಿ ಮಾಡಿರುತ್ತೇನೆಂದು ತನಗೆ ಗೊತ್ತಿಲ್ಲ, ತನ್ನ ಸಮಕ್ಷಮ ಪೊಲೀಸರು ಯಾವುದೇ ಮಹಜರ್ ಮಾಡಿಲ್ಲ, ಯಾವುದೇ ವಸ್ತುಗಳನ್ನು ಅಮಾನತ್ತು ಮಾಡಿಕೊಂಡಿಲ್ಲ ಹಾಗೂ ತಾವು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲವೆಂದು ನಿಪಿ.2 ರಲ್ಲಿನ ವಿಚಾರಗಳು ಗೊತ್ತಿಲ್ಲವೆಂದು ಸದರಿ ದಾಖಲೆಗಳಿಗೆ ತದ್ವಿರುದ್ಧವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅಲ್ಲದೇ ನ್ಯಾಯಾಲಯದ ಮುಂದಿರುವ ಮು.ಮಾ-1 ನ್ನು ಸಹಾ ನೋಡಿ ಗುರುತಿಸುವಲ್ಲಿಯೂ ಸಹ ಸದರಿ ಸಾಕ್ಷಿದಾರರು ವಿಫಲರಾಗಿರುತ್ತಾರೆ

18. ಹೀಗಿರುವಾಗ ಸದರಿ ಅ.ಸಾ-2 ಮತ್ತು 3 ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ ನುಡಿದ ಸಾಕ್ಷ್ಯವನ್ನು ಗಮನಿಸಿದ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿಕೊಂಡು ವಿವರವಾದ ಪಾಟೀ ಸವಾಲಿಗೆ ಒಳಪಡಿಸಿ, ಘಟನೆಗೆ ಹಾಗೂ ದಾಖಲೆಗಳಿಗೆ ಪೂರಕವಾದ ಸೂಚನೆಗಳನ್ನು ಸದರಿ ಸಾಕ್ಷಿದಾರರಿಗೆ ಸೂಚಿಸಿದರೂ ಸಹ ಸದರಿ ಸಾಕ್ಷಿದಾರರು ಅಭಿಯೋಜನೆಯವರ ಸೂಚನೆಗಳನ್ನು ಸ್ಪಷ್ಟವಾಗಿ ತಮ್ಮ ಪಾಟೀ ಸವಾಲಿನಲ್ಲಿ ಅಲ್ಲಗಳೆದಿರುತ್ತಾರೆ.

19. ಅಸಾ-1 ಇಮ್ರಾನ್ ರವರು ದಾಳಿಯ ಮುಂದಾಳತ್ವ ವಹಿಸಿದ ಅಧಿಕಾರಿಯಾಗಿದ್ದು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ದಿನಾಂಕಃ 09.09.2023 ರಂದು ಸಂಜೆ 7-15 ಗಂಟೆ ಸಮಯದಲ್ಲಿ ಚಾಸಾ-1 ರವರಿಗೆ ಚಾಸಾ-4 ರವರು ಅವರ ಬೀಟ್ ವ್ಯಾಪ್ತಿಯ ಕೃಷ್ಣಾಪುರ ಗ್ರಾಮದಲ್ಲಿ ಆರೋಪಿಯು ತಮ್ಮ ಚಿಲ್ಲರೆ ಅಂಗಡಿ ಮುಂಭಾಗ ಸಾರ್ವಜನಿಕ ಸ್ಥಳದಲ್ಲಿ ಯಾವುದೇ ಪರವಾಗಿ ಇಲ್ಲದೇ ಅಕ್ರಮವಾಗಿ ಸಾರ್ವಜನಿಕರಿಗೆ ಮದ್ಯ ಮಾರಾಟ ಮಾಡುತ್ತಿರುವ ಬಗ್ಗೆ ಬಾತ್ಮಿ ಬಂದಿರುತ್ತದೆ ಎಂದು ತಿಳಿಸಿದ್ದು, ಸದರಿ ಬಾತ್ಮಿಯ ಆಧಾರದ ಮೇರೆಗೆ ಒಂದು ಜ್ಞಾಪನ ತಯಾರಿಸಿ ಚಾಸಾ-7 ರವರಿಗೆ ಜ್ಞಾಪನ ನೀಡಿದ ಮೇರೆಗೆ ಪ್ರಕರಣವನ್ನು ದಾಖಲಿಸಿಕೊಂಡಿರುತ್ತಾರೆ. ನಂತರ ಚಾಸಾ-4 ರವರೊಂದಿಗೆ ದಾಳಿ ಮಾಡಲು

ಠಾಣೆಯಿಂದ ಹೊರಟು ಕೃಷ್ಣಾಪುರ ಗ್ರಾಮದ ಹೊರವಲಯದಲ್ಲಿ ಚಾಸಾ-2 ಮತ್ತು 3 ರವರನ್ನು ಪಂಚರನ್ನಾಗಿ ನೇಮಿಸಿಕೊಂಡು, ಕೃತ್ಯ ಸ್ಥಳದ ಬಳಿ ಹೋಗಿ ಸ್ವಲ್ಪ ದೂರದಿಂದ ಮರೆಯಲ್ಲಿ ನಿಂತು ನೋಡಲಾಗಿ ಆರೋಪಿಯು ಬಿಳಿ ಪ್ಲಾಸ್ಟಿಕ್ ಚೀಲದಲ್ಲಿ ಮದ್ಯವನ್ನು ಸಾರ್ವಜನಿಕರಿಗೆ ಮಾರಾಟ ಮಾಡತ್ತಿರುವುದು ಕಂಡುಬಂದಿದ್ದು, ದಾಳಿ ಮಾಡಿದಾಗ ಸದರಿ ವ್ಯಕ್ತಿ ಅಲ್ಲಿಂದ ತಪ್ಪಿಸಿಕೊಂಡು ಹೋಗಿರುತ್ತಾರೆ ನಂತರ ಬಿಟ್ಟು ಹೋಗಿದ್ದ ಬಿಳಿ ಚೀಲವನ್ನು ಪರಿಶೀಲಿಸಲಾಗಿ 90 ಎಂ ಎಲ್ ನ 41 ರಾಜಾ ವಿಸ್ಕಿಯ ಪೌಚುಗಳು ಇದ್ದು, ಪಂಚರ ಸಮಕ್ಷಮ ದೊರೆತ ಸ್ವತ್ತುಗಳನ್ನು ಅಮಾನತ್ತುಪಡಿಸಿ ಪಂಚನಾಮೆ ಕ್ರಮ ಜರುಗಿಸಿ, ನಂತರ ಠಾಣೆಗೆ ಬಂದು ಅಮಾನತ್ತುಪಡಿಸಿಕೊಂಡ ಮಾಲು, ಸ್ಥಳ ಮಹಜರ್ ಮತ್ತು ತನಿಖಾ ವರದಿಯನ್ನು ಮುಂದಿನ ಕ್ರಮಕ್ಕಾಗಿ ಚಾಸಾ-7 ರವರಿಗೆ ವಹಿಸಿಕೊಟ್ಟಿರುವುದಾಗಿ ಸಾಕ್ಷ್ಯ ನುಡಿಯುತ್ತಾರೆ. ಅಮಾನತು ಪಡಿಸಿಕೊಂಡ ಮದ್ಯವನ್ನು ಮು.ಮಾ-1 ಎಂದು ಗುರುತಿಸಿರುತ್ತಾರೆ. ಸದರಿಯವರನ್ನು ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿ, ಆ ದಿನ ಮಾಹಿತಿ ಬಂದಾಗ ಠಾಣೆಯಲ್ಲಿ ಇದ್ದೆನೆಂದು, ನಿಪಿ-1 ರಲ್ಲಿ ಸದರಿ ಸಮಯವನ್ನು ನಮೂದು ಮಾಡಿರುವುದಿಲ್ಲ. ಕೃತ್ಯ ಸ್ಥಳ ಹೊಸದುರ್ಗದಿಂದ ಸುಮಾರು 18-20 ಕಿಮೀ ದೂರದಲ್ಲಿ ಇರುತ್ತದೆಂದು, ಕೃಷ್ಣಾಪುರ ಗ್ರಾಮ ಯಾವ ಹೋಬಳಿಗೆ ಸಂಬಂಧಿಸಿದ್ದು ಎಂದು ನನಗೆ ಗೊತ್ತಿಲ್ಲ ಮತ್ತು ಅದನ್ನು ನಮೂದಿಸಿಲ್ಲವೆಂದು, ದಾಳಿ ನಡೆಸಿದ ಚಿಲ್ಲರೆ ಅಂಗಡಿ ಯಾರಿಗೆ ಸೇರಿರುತ್ತದೆ ಎಂದು ನಾನು ದಾಖಲೆಯನ್ನು ಪಡೆದಿರುವುದಿಲ್ಲ. ಘಟನಾ ಸ್ಥಳಕ್ಕೆ ಸಂಬಂಧಿಸಿದ ಕಚ್ಚಾ ನಕ್ಷೆಯನ್ನು ನಾನು ತಯಾರಿಸಿರುವುದಿಲ್ಲ. ನಾನು ದಾಳಿಗೆ ಖಾಸಗಿ ವಾಹನದಲ್ಲಿ ಹೋಗಿರುವುದಾಗಿ, ಸದರಿ ವಾಹನದ ಮಾಲೀಕನಾಗಲೀ, ಚಾಲಕನಾಗಲೀ ಹಾಗೂ ಅದರ ನೋಂದಣಿ ಸಂಖ್ಯೆ ಬಗ್ಗೆ ನನಗೆ ಮಾಹಿತಿ ಇಲ್ಲ ಮತ್ತು ಅದನ್ನು ನಾನು ನಮೂದು ಮಾಡಿಲ್ಲವೆಂದು. ಯಾವ ಮಾರ್ಗದಿಂದ ಕೃಷ್ಣಾಪುರ ಗ್ರಾಮಕ್ಕೆ ಹೋಗಿರುತ್ತೇನೆ ಎಂದು ನೆನಪಿಲ್ಲ. ನಾನು ನಿಪಿ-1 ರ ಜ್ಞಾಪನವನ್ನು ದಾಳಿಗೆ ಹೊರಡುವ ಮೊದಲೇ ನೀಡಿರುತ್ತೇನೆಂದು ನುಡಿಯುತ್ತಾರೆ. ಮುಂದುವರೆದು ದಾಳಿ ಸಮಯದಲ್ಲಿ ನಾವು ಹೋದಾಗ ಸುಮಾರು 4-5 ಜನ ಇದ್ದರು. ನಂತರ ಯಾರೂ ಇರಲಿಲ್ಲ. ಸದರಿ 4-5 ಜನರ ಹೆಸರು ವಿಳಾಸದ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ ಹಾಗೂ ಕೃತ್ಯ ಸ್ಥಳದ ಚೆಕ್ಕುಬಂದಿಯನ್ನು

ನುಡಿಯುತ್ತಾರೆ. ಯಾವುದೇ ದಾಳಿ ಮಾಡದಿದ್ದರೂ ಇಲಾಖಾ ಅಂಕಿ ಅಂಶಗಳಿಗೊಸ್ಕರ ಆರೋಪಿಯ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೀರಿ, ಪಂಚನಾಮೆಯನ್ನು ಠಾಣೆಯಲ್ಲಿಯೇ ಸೃಷ್ಟಿ ಮಾಡಿರುತ್ತೀರಿ ಎಂದು ಘಟನೆಗೆ ಹಾಗೂ ದಾಖಲೆಗಳಿಗೆ ವಿರುದ್ದವಾದ ಸೂಚನೆಗಳನ್ನು ಸದರಿ ಸಾಕ್ಷಿದಾರರಿಗೆ ಸೂಚಿಸಿದ್ದು ಅವರ ಸೂಚನೆಗಳನ್ನು ತಮ್ಮ ಪಾಟೀ ಸವಾಲಿನಲ್ಲಿ ಅಲ್ಲಗಳೆದಿರುತ್ತಾರೆ. ಸದರಿ ಸಾಕ್ಷಿದಾರರು ದಾಳಿ ನಡೆಸಿದ ಪ್ರಮುಖ ಸಾಕ್ಷಿದಾರರಾಗಿದ್ದು, ಆದರೆ ಸದರಿ ಸಾಕ್ಷಿದಾರರ ಸಾಕ್ಷ್ಯವು ಯಾವುದೇ ಇತರ ಸ್ವತಂತ್ರ್ಯ ಸಾಕ್ಷಿಯ ಹೇಳಿಕೆಯಿಂದ ದೃಡಪಟ್ಟಿರುವುದಿಲ್ಲ. ಸದರಿ ಸಾಕ್ಷಿದಾರರು ಇಲಾಖಾ ಸಾಕ್ಷಿಯಾಗಿರುವ ಕಾರಣ ದಾಳಿ ಮಾಡಿದ ಬಗ್ಗೆ ಹಾಗೂ ಮಹಜರ್ ಕ್ರಮ ಜರುಗಿಸಿದ ಬಗ್ಗೆ ಸದರಿ ಸಾಕ್ಷಿದಾರರ ಒಬ್ಬರೇ ಸಾಕ್ಷ್ಯದಿಂದ ನ್ಯಾಯಾಲಯಕ್ಕೆ ಅನುಮಾನದ ಛಾಯೆ ಮೂಡುತ್ತದೆ.

20. ಇನ್ನು ಅಸಾ.4 ತ್ಯಾಗರಾಜ ನಾಯ್ಕ ಡಿ ಪೊಲೀಸ್ ಮುಖ್ಯ ಪೇದೆ ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ದಿನಾಂಕ 09.09.2023 ರಂದು ಸಂಜೆ 7-10 ಗಂಟೆ ಸಮಯದಲ್ಲಿ ನಾನು ಠಾಣೆಯಲ್ಲಿ ಇರುವಾಗ ಬಾತ್ಮಿದಾರರಿಂದ ಕೃಷ್ಣಾಪುರ ಗ್ರಾಮದ ಚೇತನ ತಂದೆ ರಾಜಪ್ಪ 35 ವರ್ಷ ತಮ್ಮ ಚಿಲ್ಲರೆ ಅಂಗಡಿ ಮುಂಭಾಗ ಸಾರ್ವಜನಿಕ ಸ್ಥಳದಲ್ಲಿ ಯಾವುದೇ ಪರವಾಗಿ ಇಲ್ಲದೇ ಅಕ್ರಮವಾಗಿ ಸಾರ್ವಜನಿಕರಿಗೆ ಮದ್ಯ ಮಾರಾಟಮಾಡುತ್ತಿರುವ ಬಗ್ಗೆ ಬಾತ್ಮಿ ಬಂದಿರುತ್ತದೆಂದು, ಸದರಿ ವಿಚಾರವನ್ನು ಚಾಸಾ-1 ರವರಿಗೆ ತಿಳಿಸಿದ್ದು ಅದರಂತೆ ಅವರು ಜ್ಞಾಪನ ತಯಾರಿಸಿ ಸಂಜೆ 7-25 ಗಂಟೆ ಸಮಯದಲ್ಲಿ ಚಾಸಾ-7 ರವರಿಗೆ ಜ್ಞಾಪನ ನೀಡಿ ಚಾಸಾ-1 ಮತ್ತು ತಾನು ಠಾಣೆಯಿಂದ ಹೊರಟಿದ್ದು ಕೃಷ್ಣಾಪುರ ಗ್ರಾಮದ ಹೊರವಲಯದಲ್ಲಿ ಚಾಸಾ-2 ಮತ್ತು 3 ರವರನ್ನು ಕರೆದುಕೊಂಡು ಬಂದಿದ್ದು, ಸದರಿ ಪಂಚರಿಗೆ ಬಾತ್ಮಿ ಬಗ್ಗೆ ಮಾಹಿತಿ ತಿಳಿಸಿ ದಾಳಿ ಸಮಯದಲ್ಲಿ ಪಂಚರಾಗಿ ನೇಮಿಸಿಕೊಂಡು ಕೃತ್ಯ ಸ್ಥಳದ ಬಳಿ ಹೋಗಿ ಸ್ವಲ್ಪ ದೂರದಿಂದ ಮರೆಯಲ್ಲಿ ನಿಂತು ನೋಡಲಾಗಿ ಒಬ್ಬ ವ್ಯಕ್ತಿ ಬಿಳಿ ಪ್ಲಾಸ್ಟಿಕ್ ಚೀಲದಲ್ಲಿ ಮದ್ಯವನ್ನು ಸಾರ್ವಜನಿಕರಿಗೆ ಮಾರಾಟ ಮಾಡತ್ತಿರುವುದು ಕಂಡುಬಂದಿದ್ದು, ದಾಳಿ ಮಾಡಿದಾಗ ಸದರಿ ವ್ಯಕ್ತಿ ಅಲ್ಲಿಂದ ತಪ್ಪಿಸಿಕೊಂಡು ಹೋಗಿರುತ್ತಾರೆಂದು, ಹಿಡಿಯಲು ಪ್ರಯತ್ನಿಸಿದರೂ

ಸಿಗಲಿಲ್ಲ. ಆಸಾಮಿ ಬಿಟ್ಟು ಹೋಗಿದ್ದ ಬಿಳಿ ಚೀಲವನ್ನು ಪರಿಶೀಲಿಸಲಾಗಿ 90 ಎಂ ಎಲ್ ನ 41 ರಾಜಾ ವಿಸ್ಕಿಯ ಪೌಚುಗಳು ದೊರೆತವು. ಅವುಗಳನ್ನು ವಶಪಡಿಸಿಕೊಂಡು ಬಿಳಿ ಬಟ್ಟೆಯಿಂದ ಸುತ್ತಿ ಕೆ.ಎಸ್.ಪಿ ಸೀಲು ಕ್ರಮ ಜರುಗಿಸಲಾಗಿ ನಂತರ ಚಾಸಾ-1 ರವರು ಠಾಣೆಗೆ ಬಂದು ಮುಂದಿನ ಕ್ರಮಕ್ಕಾಗಿ ಕಡತವನ್ನು ಚಾಸಾ-7 ರವರಿಗೆ ನೀಡಿರುವುದಾಗಿ ಸಾಕ್ಷ್ಯ ನುಡಿಯುತ್ತಾರೆ. ಅಮಾನತು ಪಡಿಸಿಕೊಂಡ ಮದ್ಯವನ್ನು ಮು.ಮಾ-1 ಎಂದು ಗುರುತಿಸಿರುತ್ತಾರೆ. ಸದರಿಯವರನ್ನು ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿ, ಘಟನೆಗೆ ಹಾಗೂ ದಾಖಲೆಗಳಿಗೆ ವಿರುದ್ಧವಾದ ಸೂಚನೆಗಳನ್ನು ಸದರಿ ಸಾಕ್ಷಿದಾರರಿಗೆ ಸೂಚಿಸಿದ್ದು ಅವರ ಸೂಚನೆಗಳನ್ನು ತಮ್ಮ ಪಾಟೀ ಸವಾಲಿನಲ್ಲಿ ಅಲ್ಲಗಳೆದಿರುತ್ತಾರೆ.

21. ಅಸಾ-5 ಭೀಮನಗೌಡ ಪಾಟೀಲ್ ತನಿಖೆ ಪೂರೈಸಿ ಅಂತಿಮ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದ ಪೊಲೀಸ್ ಅಧಿಕಾರಿಯಾಗಿದ್ದು ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ದಿನಾಂಕಃ 29.10.2023 ರಂದು ಚಾಸಾ-7 ರವರಿಂದ ಪ್ರಕರಣದ ಕಡತವನ್ನು ಪಡೆದು, ದಿನಾಂಕ 29.010.2023 ರಂದು ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡ ಮದ್ಯದ ಸ್ವತ್ತುಗಳ ರಾಸಾಯನಿಕ ವರದಿ ಸ್ವೀಕರಿಸಿ ತನಿಖೆ ಪೂರ್ಣಗೊಳಿಸಿ ಆರೋಪಿಯ ವಿರುದ್ಧ ಅಂತಿಮ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಸಾಕ್ಷಿದಾರರನ್ನು ಆರೋಪಿ ಪರ ವಕೀಲರು ವಿವರವಾದ ಪಾಟೀ ಸವಾಲಿಗೆ ಒಳಪಡಿಸಿರುತ್ತಾರೆ. ಪಾಟೀ ಸವಾಲಿನಲ್ಲಿ ಚಾಸಾ-7 ರವರಿಂದ ಕಡತವನ್ನು ಸ್ವೀಕರಿಸಿರುವುದು ಸುಳ್ಳು, ಯಾವುದೇ ಸ್ವತ್ತನ್ನು ರಾಸಾಯನಿಕ ಪರೀಕ್ಷಾ ವರದಿಯನ್ನು ಪಡೆದಿಲ್ಲ, ಸಾಕ್ಷಿಗಳ ಹೇಳಿಕೆಗಳನ್ನು ದಾಖಲಿಸಿಕೊಂಡಿಲ್ಲ, ಪ್ರಥಮ ವರ್ತಮಾನ ವರದಿಯಲ್ಲಿರುವ ಅಂಶಗಳನ್ನು ಯತಾವತ್ತಾಗಿ ದೋಷಾರೋಪಣಾ ಪಟ್ಟಿಯಲ್ಲಿ ನಮೂದಿಸಿರುತ್ತೀರಿ ಆರೋಪಿಗೆ ಮುದ್ದೆ ಮಾಲಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧವಿರುವುದಿಲ್ಲ ಆರೋಪಿಯ ವಿರುದ್ಧ ಸುಳ್ಳು ಪ್ರಕಣದ ದಾಖಲಿಸಿರುತ್ತೀರಿ ಎಂಬ ಪ್ರಶ್ನೆಗಳನ್ನು ಸದರಿ ಸಾಕ್ಷಿದಾರರು ಸರಿಯಲ್ಲ ಮತ್ತು ಸುಳ್ಳು ಎಂದು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ. ಆದರೆ, ದಾಳಿ

ಮಾಡುವ ಮೊದಲೇ ಪ್ರಥಮ ವರ್ತಮಾನ ವರದಿ ತಯಾರಾಗಿರುತ್ತದೆ ಎಂದು ಒಪ್ಪಿಕೊಳ್ಳುತ್ತಾರೆ.

22. ಅಸಾ-6 ಧರಣೇಶಪ್ಪ ಪಿ ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ತಾನು ದಿನಾಂಕ 09.09.2023 ಚಾಸಾ-1 ರವರು ನೀಡಿದ ಜ್ಞಾಪನವನ್ನು ಸ್ವೀಕರಿಸಿ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ಮೇಲಾಧಿಕಾರಿಗಳಿಗೆ ಹಾಗೂ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುವುದಾಗಿ, ಅದೇ ದಿನ ಚಾಸಾ-1 ರವರು ಹಾಜರು ಪಡಿಸಿದ ಮದ್ಯದ ಪೌಚ್ ಗಳನ್ನು ಸ್ವೀಕರಿಸಿ ಮುಂದಿನ ಕ್ರಮಕ್ಕಾಗಿ ಮಾಲು ಪಟ್ಟಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುವುದಾಗಿ ಹಾಗೂ ಚಾಸಾ-2 ರಿಂದ 4 ರವರ ಹೇಳಿಕೆಗಳನ್ನು ಪ್ರತ್ಯೇಕವಾಗಿ ದಾಖಲಿಸಿಕೊಂಡಿರುವುದಾಗಿ, ನಂತರ ದಿನಾಂಕ 10.09.2023 ರಂದು ಆರೋಪಿ ಠಾಣೆಗೆ ಹಾಜರಾಗಿದ್ದು, ವಿಚಾರಣಾ ನೋಟೀಸ್ ನೀಡಿ ಕಳುಹಿಸಿರುವುದಾಗಿ, ನಂತರ ರಾಸಾಯನಿಕ ಪರೀಕ್ಷೆಗಾಗಿ ಮದ್ಯದ ಪೌಚ್ ಗಳನ್ನು ಚಿತ್ರದುರ್ಗಕ್ಕೆ ಕಳುಹಿಸಿ, ಪ್ರಕರಣದ ಕಡತವನ್ನು ಚಾಸಾ-8 ರವರಿಗೆ ವಹಿಸಿಕೊಟ್ಟಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಸದರಿಯವರನ್ನು ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿ, ಘಟನೆಗೆ ಹಾಗೂ ದಾಖಲೆಗಳಿಗೆ ವಿರುದ್ಧವಾದ ಸೂಚನೆಗಳನ್ನು ಸದರಿ ಸಾಕ್ಷಿದಾರರಿಗೆ ಸೂಚಿಸಿದ್ದು ಅವರ ಸೂಚನೆಗಳನ್ನು ತಮ್ಮ ಪಾಟೀ ಸವಾಲಿನಲ್ಲಿ ಅಲ್ಲಗಳೆದಿರುತ್ತಾರೆ. ಆದರೆ, ದಾಳಿ ಮಾಡುವ ಮೊದಲೇ ಪ್ರಥಮ ವರ್ತಮಾನ ವರದಿ ತಯಾರಾಗಿರುತ್ತದೆ ಎಂದು ಒಪ್ಪಿಕೊಳ್ಳುತ್ತಾರೆ.

23. ಮೇಲ್ಕಂಡ ಎಲ್ಲಾ ಸಾಕ್ಷಿದಾರರ ಸಾಕ್ಷ್ಯವನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಿದಾಗ ಕೃತ್ಯ ಸ್ಥಳ ಮತ್ತು ಅಮಾನತ್ತು ಮಹಜರ್ ಸಾಕ್ಷಿದಾರರಾದ ಅಸಾ-2 ಮತ್ತು 3 ರವರು ಪ್ರತಿಕೂಲ ಸಾಕ್ಷಿದಾರರಾಗಿದ್ದು, ಸದರಿಯವರನ್ನು ಅಭಿಯೋಜನೆಯವರು ವಿವರವಾದ ಪಾಟೀ ಸವಾಲಿಗೆ ಒಳಪಡಿಸಿದಾಗಲೂ ಸಹ, ಘಟನೆಗೆ ಹಾಗೂ ದಾಖಲೆಗಳಿಗೆ ಪೂರಕವಾದ ಸಾಕ್ಷ್ಯವು ಸದರಿ ಸಾಕ್ಷಿದಾರರಿಂದ ದೊರೆತಿರುವುದಿಲ್ಲ. ಅಸಾ-2 ಮತ್ತು 3 ಇಬ್ಬರೂ ಆರೋಪಿ ಮತ್ತು ಮುದ್ದೆ

ಮಾಲುಗಳನ್ನು ನೋಡಿ ಗುರುತಿಸಿರುವುದಿಲ್ಲ. ಇನ್ನು ಅಸಾ-1, 4 ರಿಂದ 6 ರವರು ಪೊಲೀಸ್ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಾಗಿದ್ದು, ಅವರುಗಳು ತಮ್ಮ ತಮ್ಮ ಮುಖ್ಯ ವಿಚಾರಣೆಯಲ್ಲಿ ನುಡಿದ ಸಾಕ್ಷ್ಯವನ್ನು ಗಮನಿಸಿದಾಗ ಅವರು ಪೊಲೀಸ್ ಅಧಿಕಾರಿಗಳಾಗಿದ್ದು ತನಿಖೆಯ ಬಗ್ಗೆ ಸಾಕ್ಷ್ಯ ನುಡಿದಿರುವುದನ್ನು ಒಪ್ಪಿಕೊಳ್ಳಬೇಕಾದಂತಹ ಅಂಶ. ಆದರೆ, ಪ್ರಕರಣದ ಪಂಚನಾಮೆ ಸಾಕ್ಷಿದಾರರಾದ ಅಸಾ-2 ಮತ್ತು 3 ರವರು ಅಭಿಯೋಜನೆಯ ಮೊಕದ್ದಮೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಸಾಕ್ಷಿದಾರರ ಸಾಕ್ಷ್ಯದಿಂದ ಆರೋಪಿಯೇ ಆಪಾದಿಸಿದಂತಹ ಕೃತ್ಯವನ್ನು ಎಸಗಿದ್ದಾರೆ ಎಂಬುದನ್ನು ಸಾಬೀತುಪಡಿಸಲು ಹಾಗೂ ಅಬಕಾರಿ ಪೊಲೀಸ್ ಅಧಿಕಾರಿಗಳ ತನಿಖೆಗೆ ಸಂಬಂಧಿಸಿದ ಸಾಕ್ಷ್ಯವು ಯಾವುದೇ ರೀತಿಯಲ್ಲಿ ಪ್ರಯೋಜನವಾಗುವುದಿಲ್ಲ.

24. ಮುಂದುವರೆದು, ಅಸಾ-5 ರವರು ತನಿಖೆಯನ್ನು ಮುಂದುವರೆಸಿ ಆರೋಪಿಯ ವಿರುದ್ಧ ಆರೋಪ ಸಾಬೀತಾದ ಕಾರಣ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುವ ಸಾಕ್ಷಿದಾರರಾಗಿದ್ದು, ಆದರೆ ಸದರಿ ಸಾಕ್ಷಿದಾರರಿಂದಲೂ ಸಹ ಅಭಿಯೋಜನೆಗೆ ಪೂರಕವಾದ ಸಾಕ್ಷ್ಯವು ಹೊರಹೊಮ್ಮಿರುವುದಿಲ್ಲ. ಈ ಎಲ್ಲಾ ಮೇಲ್ಕಂಡ ಸಾಕ್ಷಿದಾರರ ಸಾಕ್ಷ್ಯವನ್ನು ತಾಳೆ ಮಾಡಿ ನೋಡಿದಾಗ ಸಾಕ್ಷಿದಾರರ ಸಾಕ್ಷ್ಯವು ಪರಸ್ಪರರ ಸಾಕ್ಷ್ಯಕ್ಕೆ ಹಾಗೂ ದಾಖಲೆಗಳಿಗೆ ವ್ಯತಿರಿಕ್ತತೆಯಿಂದ ಕೂಡಿರುವ ಕಾರಣ ಮತ್ತು ಯಾವುದೇ ಸ್ವತಂತ್ರ ಸಾಕ್ಷಿದಾರರಿಂದ ದೃಢಪಡದ ಕಾರಣ ಅಭಿಯೋಜನೆಯವರು ಆರೋಪಿಯ ಮೇಲೆ ಹೊರಿಸಿರುವ ಪ್ರಸ್ತುತ ಆರೋಪಗಳನ್ನು ಸಂಶಯಾತೀತವಾಗಿ ರುಜುವಾತುಪಡಿಸಲು ಸಂಪೂರ್ಣವಾಗಿ ವಿಫಲರಾಗಿರುತ್ತಾರೆ. ಇದರಿಂದ ಆರೋಪಿಗೆ ಸಂಶಯದ ಲಾಭವನ್ನು ನೀಡಿ, ಸದರಿ ಪ್ರಕರಣದಲ್ಲಿ ಆರೋಪಿಯನ್ನು ನಿರ್ದೋಷಿ ಎಂದು ನಿರ್ಣಯಿಸಿ ಸದರಿ 1 ಮತ್ತು 2 ನೇ ಅಂಶವನ್ನು ***ನಕಾರಾತ್ಮಕವಾಗಿ*** ಉತ್ತರಿಸಿದ್ದೇನೆ.

25. **ಅಂಶಃ 3:** ಅಂಶ-1 ಮತ್ತು 2 ರಲ್ಲಿ ಚರ್ಚಿಸಿರುವ ಕಾರಣಗಳಿಗಾಗಿ ಈ ಕೆಳಕಂಡಂತೆ ನ್ಯಾಯಾಲಯವು ಆದೇಶಿಸಿರುತ್ತದೆ.

**<u>ಆದೇಶ</u>**

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿ ಅಧಿಕಾರಯುಕ್ತನಾಗಿ ಆರೋಪಿಯ ವಿರುದ್ಧ ಇರುವ ಕರ್ನಾಟಕ ಅಬಕಾರಿ ಕಾಯ್ದೆ ಕಲಂ. 32 ಮತ್ತು 34 ರಡಿ ದಂಡಿಸಲ್ಪಡುವ ಆರೋಪಗಳಿಂದ ಆರೋಪಿಯನ್ನು ದೋಷಮುಕ್ತಗೊಳಿಸಿ ಬಿಡುಗಡೆ ಮಾಡಿದೆ.

ಆರೋಪಿ ಮತ್ತು ಅವರ ಜಾಮೀನುದಾರರು ಬರೆದುಕೊಟ್ಟಿರುವ ಜಾಮೀನು ಮುಚ್ಚಳಿಕೆಯನ್ನು ಇನ್ನು 6 ತಿಂಗಳುಗಳ ಕಾಲ ವಿಸ್ತರಿಸಲಾಗಿದೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ.452(4) ರಲ್ಲಿ ನಿಗಧಿಪಡಿಸಿರುವ ಸಮಯ ಮುಗಿದ ನಂತರ ಮು.ಮಾ-1 ನ್ನು ನಾಶಪಡಿಸಲು ಆದೇಶಿಸಲಾಗಿದೆ.

(ಮೇಲ್ಕಂಡ ತೀರ್ಪನ್ನು ಶೀಘ್ರಲಿಪಿಗಾರಳಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನವನ್ನು ಕೊಟ್ಟು, ಬೆರಳಚ್ಚಿನ ನಂತರ ತಿದ್ದುಪಡಿಯನ್ನು ಮಾಡಿ, ದಿನಾಂಕಃ 04 ನೇ ಜುಲೈ 2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.)

**(ಪ್ರಸನ್ನ ಕುಮಾರ್ ಸಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹೊಸದುರ್ಗ.**

**<u>-ಅನುಬಂಧ-</u>**

**<u>1. ಅಭಿಯೋಜನೆಯ ಪರ ವಿಚಾರಣೆ ಮಾಡಲಾದ ಸಾಕ್ಷಿದಾರರುಃ</u>**

ಅಸಾ-1 - ಇಮ್ರಾನ್

ಅಸಾ-2 - ಜಯಪ್ಪ

ಅಸಾ-3 - ಕಾಟೇಶಪ್ಪ

ಅಸಾ-4 - ತ್ಯಾಗರಾಜ ನಾಯ್ಕ

ಅಸಾ-5 - ಭೀಮನಗೌಡ ಪಾಟೀಲ್

ಅಸಾ-6 - ಧರಣೇಶಪ್ಪ

2. ಅಭಿಯೋಜನೆಯ ಪರ ಗುರುತಿಸಲಾದ ನಿಶಾನೆಗಳ ಪಟ್ಟಿಃ

| | | |
|---|---|---|
| ನಿಪಿ-1 | - | ಜ್ಞಾಪನ |
| ನಿಪಿ-1(ಎ) | - | ಅಸಾ-1 ರವರ ಸಹಿ |
| ನಿಪಿ-1(ಬಿ) | - | ಅಸಾ-2 ರವರ ಸಹಿ |
| ನಿಪಿ-2 | - | ಅಮಾನತ್ತು ಪಂಚನಾಮೆ |
| ನಿಪಿ-2(ಎ) | - | ಅಸಾ-1 ರವರ ಸಹಿ |
| ನಿಪಿ-2(ಬಿ) | - | ಅಸಾ-2 ರವರ ಸಹಿ |
| ನಿಪಿ-2(ಸಿ) | - | ಅಸಾ-3 ರವರ ಸಹಿ |
| ನಿಪಿ-3 | - | ಪಂಚರಿಗೆ ನೀಡಿದ ನೋಟೀಸ್ |
| ನಿಪಿ-3(ಎ) | - | ಅಸಾ-1 ರವರ ಸಹಿ |
| ನಿಪಿ-4 | - | ಅಸಾ-2 ರವರ ಹೇಳಿಕೆ |
| ನಿಪಿ-4(ಎ) | - | ಅಸಾ-6 ರವರ ಸಹಿ |
| ನಿಪಿ-5 | - | ಅಸಾ-3 ರವರ ಹೇಳಿಕೆ |
| ನಿಪಿ-5(ಎ) | - | ಅಸಾ-4 ರವರ ಸಹಿ |
| ನಿಪಿ-6 | - | ರಾಸಾಯನಿಕ ವಿಶ್ಲೇಷಣಾ ವರದಿ |
| ನಿಪಿ-6(ಎ) | - | ಅಸಾ-5 ರವರ ಸಹಿ |
| ನಿಪಿ-7 | - | ಪ್ರಥಮ ವರ್ತಮಾನ ವರದಿ |
| ನಿಪಿ-7(ಎ) | - | ಅಸಾ-6 ರವರ ಸಹಿ |
| ನಿಪಿ-8 | - | ಸ್ವತ್ತು ಪಟ್ಟಿ |
| ನಿಪಿ-8(ಎ) | - | ಅಸಾ-6 ರವರ ಸಹಿ |
| ನಿಪಿ-9 | - | ರಹದಾರಿ ಪತ್ರ |
| ನಿಪಿ-9(ಎ) | - | ಅಸಾ-6 ರವರ ಸಹಿ |
| ನಿಪಿ-10 | - | ಆರೋಪಿಗೆ ನೀಡಿದ ವಿಚಾರಣಾ ನೋಟೀಸ್ |
| ನಿಪಿ-10(ಎ) | - | ಅಸಾ-6 ರವರ ಸಹಿ |
| ನಿಪಿ-11 | - | ಚಾಸಾ-4 ರವರ ಹೇಳಿಕೆ |
| ನಿಪಿ-11(ಎ) | - | ಅಸಾ-6 ರವರ ಸಹಿ |

**3. ಆರೋಪಿತರ ಪರ ವಿಚಾರಣೆ ಮಾಡಲಾದ ಸಾಕ್ಷಿದಾರರುಃ**

ಇಲ್ಲಾ

**4. ಆರೋಪಿತರ ಪರ ಗುರುತಿಸಲಾದ ನಿಶಾನೆಗಳ ಪಟ್ಟಿಃ**

ಇಲ್ಲಾ

**5. ಅಭಿಯೋಜನೆಯ ಪರ ಗುರುತಿಸಲಾದ ಮುದ್ದೆಮಾಲುಗಳ ಪಟ್ಟಿಃ**

ಮುಮಾ-1 - ರಾಸಾಯನಿಕ ಪರೀಕ್ಷೆಗಾಗಿ ಮಾದರಿಗೆ ತೆಗೆದ 90 ಎಂ.ಎಲ್ ನ 41 ರಾಜಾ ವಿಸ್ಕಿ ಪೌಚ್ ಗಳು

PRASANNAKUMAR C

Digitally signed by PRASANNAKUMAR C
Date: 2026.07.06 14:51:08 +0530

(ಪ್ರಸನ್ನ ಕುಮಾರ್ ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹೊಸದುರ್ಗ.